ನಿರ್ವಹಿಸಲಾಗುತ್ತಿದೆ.

ಸರಕಾರಿ ಜಮೀನನ್ನು ಒತ್ತುವರಿ ಮಾಡಿರುವುದನ್ನು ತೆರವುಗೊಳಿಸುವುದು

488 (881) ಡಾ॥ ಸುಧಾಕರ್ ಎಂ. ಪಿ. (ಚಿಂತಾಮಣಿ):–ಮಾನ್ಯ ಮುಖ್ಯಮಂತ್ರಿಗಳು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಚಿಂತಾಮಣಿ ತಾಲ್ಲೂಕಿನಲ್ಲಿ ಚಿಂತಾಮಣಿ ಗ್ರಾಮದ ಸರ್ವೆ ನಂ. 34 ರಲ್ಲಿ ಉಳಿಕೆ ಇರುವ 1.02 ಗುಂಟ ಜಮೀನನ್ನು ಒತ್ತುವರಿ ಮಾಡಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಸರಕಾರಿ ಜಾಗವನ್ನು ಒತ್ತುವರಿ ಮಾಡಿರುವವರು ಯಾರು ಹಾಗೂ ಈ ಜಾಗದಲ್ಲಿ ನಿವೇಶನಗಳನ್ನು ಮಾಡಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಇ) ಸರಕಾರಿ ಜಾಗವನ್ನು ಎಷ್ಟು ಬಾರಿ ಅಳತೆ ಮಾಡಿ ಗಡಿ ಗುರ್ತಿಸಲಾಗಿರುತ್ತದೆ;

ಈ) ಸರಕಾರಿ ಜಾಗವನ್ನು ಸರಕಾರಕ್ಕೆ ಉಳಿಸಿಕೊಳ್ಳಲು ಯಾವ ಕ್ರಮ ಕೈಗೊಳ್ಳಲಾಗಿದೆ (ವಿವರಗಳನ್ನು ನೀಡುವುದು)?

ಶ್ರೀ ಡಿ. ವಿ. ಸದಾನಂದಗೌಡ (ಮುಖ್ಯಮಂತ್ರಿಗಳು):–

ಅ) ಹೌದು.

ಆ) ಈ ಸರ್ಕಾರಿ ಜಮೀನಿನಲ್ಲಿ ಶ್ರೀ ರಾಮಕೃಷ್ಣಪ್ಪ ಬಿನ್ ಅಕುಲ ವೆಂಕಟರಮಣಪ್ಪ ರವರು 0.20 ಗುಂಟೆ, ಶ್ರೀ ಗಂಗಿರೆಡ್ಡಿ ಮತ್ತು ಮರಿಯಪ್ಪರವರು 0.22 ಗುಂಟೆ ಮತ್ತು ಶ್ರೀ ಸೊಣ್ಣಪ್ಪ ರವರು 0.21 ಗುಂಟೆ ಒತ್ತುವರಿ ಮಾಡಿಕೊಂಡಿರುತ್ತಾರೆ. ಲೇಟ್ ರಾಮಕೃಷ್ಣಪ್ಪ, ಗಂಗಿರೆಡ್ಡಿ ಮತ್ತು ಮರಿಯಪ್ಪ ರವರುಗಳ ಜಮೀನುಗಳಿಗೆ ಈ ಜಮೀನು ಹೊಂದಿಕೊಂಡಿರುವುದರಿಂದ ಇದನ್ನು ಸೇರಿಸಿಕೊಂಡು ನಿವೇಶನಗಳನ್ನಾಗಿ ವಿಂಗಡಿಸಿ ಕಲ್ಲುಗಳನ್ನು ನೆಟ್ಟಿರುತ್ತಾರೆ. ಈ ಪೈಕಿ ಸುಮಾರು 0.02 ಗುಂಟೆ ಪ್ರದೇಶದಲ್ಲಿ ಮರಿಯಪ್ಪ ಎಂಬುವವರು ಮಾತ್ರ ಮನೆ ಕಟ್ಟಿದ್ದು, ಉಳಿಕೆ ಪ್ರದೇಶವು ಖಾಲಿ ಇರುತ್ತದೆ.

ಇ) ಎರಡು ಬಾರಿ ಅಳತೆ ಮಾಡಿ ಗಡಿ ಗುರುತಿಸಿರುತ್ತೆ.

ಈ) ಈ ವಿಷಯಕ್ಕೆ ಸಂಬಂಧಿಸಿದಂತೆ ಗಡಿ ಗುರುತಿಸಿದಾಗ ಒತ್ತುವರಿಯಾಗಿರುವುದು ಕಂಡು ಬಂದಿದ್ದು ಒತ್ತುವರಿ ಮಾಡಿರುವ ಲೇಟ್ ರಾಮಕೃಷ್ಣಪ್ಪ, ಗಂಗಿರೆಡ್ಡಿ ಮತ್ತು ಮರಿಯಪ್ಪ ರವರು ನಗರ ಸಭೆಯಲ್ಲಿ ಖಾತೆಗಳನ್ನು ಮಾಡಿಕೊಂಡಿರುವುದರಿಂದ ನಗರ

ಸಭೆಯಿಂದ ಮಾಹಿತಿಯನ್ನು ಪಡೆದು ಒತ್ತುವರಿದಾರರನ್ನು ತೆರವುಗೊಳಿಸಲು ಕಾನೂನು ರೀತ್ಯ ಕ್ರಮಕೈಗೊಳ್ಳಲಾಗುವುದು.

ಅಲ್ಪಸಂಖ್ಯಾತರ ಕಲ್ಯಾಣ ಅಭಿವೃದ್ಧಿ ಕಾರ್ಯಕ್ರಮಗಳು

489 (753) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ):– ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಅಭಿವೃದ್ಧಿ ಕಾರ್ಯಕ್ರಮಗಳು ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಸರ್ಕಾರ ಹಮ್ಮಿಕೊಂಡ ಕಾರ್ಯಕ್ರಮಗಳು ಯಾವುವು?

ಆ) ಜಿಲ್ಲಾ ಮಟ್ಟದಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿಗೆ ಯಾವುದಾದರೂ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆಯೇ?

ಇ) ಬೀದರ್ ಜಿಲ್ಲೆಯ ಅಲ್ಪಸಂಖ್ಯಾತರ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳಲ್ಲಿ ಗುರಿ ಸಾಧಿಸಲಾಗಿದೆಯೇ (ವಿವರ ನೀಡುವುದು)

ಶ್ರೀ ಡಿ.ವಿ. ಸದಾನಂದ ಗೌಡ (ಮುಖ್ಯಮಂತ್ರಿಗಳು):–

ಅ) ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ನಿರ್ದೇಶನಾಲಯದಿಂದ ಕೈಗೊಂಡಿರುವ ಯೋಜನೆಗಳ ವಿವರ ಅನುಬಂಧ–ಎ ರಲ್ಲಿ ಲಗತ್ತಿಸಿದೆ. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಹಮ್ಮಿಕೊಂಡ ಕಾರ್ಯಕ್ರಮಗಳನ್ನು ಅನುಬಂಧ–ಬಿ ರಲ್ಲಿ ಲಗತ್ತಿಸಿದೆ.

ಆ) ಅನುಬಂಧ–ಎ ಮತ್ತು ಬಿ ರಲ್ಲಿರುವ ಎಲ್ಲಾ ಕಾರ್ಯಕ್ರಮಗಳನ್ನು ಜಿಲ್ಲಾವಾರು ಅನುಷ್ಠಾನಗೊಳಿಸಲಾಗುತ್ತಿದೆ.

ಇ) ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯದ ಅನುಬಂಧ–ಸಿ ಮತ್ತು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದಿ ನಿಗಮದ ವಿವರ ಅನುಬಂಧ–ಡಿ ರಲ್ಲಿದೆ.